

# ವಾಸು ವಿಶೇಷ
## ಆಯುಷ್ಮಾನ್ ಭವ



ಕೆಲವು ಸಿನಿಮಾಗಳು ಬಿಡುಗಡೆಗೂ ಮುನ್ನ ಭರ್ಜರಿ ಸದ್ದು ಸುದ್ದಿ ಎರಡನ್ನೂ ಮಾಡುತ್ತವೆ. ಆದರೆ ಬಿಡುಗಡೆಯ ನಂತರ ಸದ್ದಡಗಿಸಿಕೊಂಡು ಹೇಳ ಹೆಸರಿಲ್ಲದ ಹಾಗೆ ಚಿತ್ರಮಂದಿರಗಳಿಂದ ಮಾಯವಾಗುತ್ತವೆ. ಇನ್ನು ಕೆಲವು ಸಿನಿಮಾಗಳು ತೆರೆಗೆ ಬರುವುದಕ್ಕೂ ಮುನ್ನ ಸುದ್ದಿ ಮಾಡುವುದು ಕಮ್ಮಿ. ತೆರೆಯ ಮೇಲೆ ನಿಧಾನಕ್ಕೆ ಪ್ರೇಕ್ಷಕರನ್ನು ಸೆಳೆದುಕೊಂಡು, ಥಿಯೇಟರ್‌ಗಳಲ್ಲಿ ಕಚ್ಚಿನಿಂತು ಸದ್ದುಮಾಡತೊಡಗುತ್ತವೆ. ಪಿ. ವಾಸು ಅವರ ಹಲವು ಸಿನಿಮಾಗಳು ಈ ವರ್ಗಕ್ಕೆ ಸೇರಿದವು.

ವಾಸು ನಿರ್ದೇಶನದ ಹೊಸ ಸಿನಿಮಾ ‘ಆಯುಷ್ಮಾನ್ ಭವ’ ಕನ್ನಡ ರಾಜ್ಯೋತ್ಸವದಂದು ತೆರೆಗೆ ಬರಲು ಸಜ್ಜಾಗಿದೆ. ಶಿವರಾಜ್‌ಕುಮಾರ್, ಅನಂತ್‌ನಾಗ್, ರಚಿತಾರಾಮ್, ನಿಧಿ ಸುಬ್ಬಯ್ಯ ಅವರೆಲ್ಲ ನಟಿಸಿರುವ ಈ ಸಿನಿಮಾ ಫೆಬ್ರುವರಿಯಲ್ಲಿಯೇ ಆರಂಭವಾಗಿತ್ತು. ಆದರೆ ಯಾರಿಗೂ ಈ ಕುರಿತು ಸುಳಿವು ದೊರೆತಿರಲಿಲ್ಲ. ಈಗ ಚಿತ್ರ ಬಿಡುಗಡೆಗೆ ಸಜ್ಜಾಗಿದೆ. ಈ ಚಿತ್ರವೂ ನಿರ್ಮಾಪಕರ ಜೇಬು ತುಳುಕಿಸುತ್ತದೆ ಎಂಬ ನಂಬಿಕೆ ನಿರ್ದೇಶಕರಿಗಿದೆ.

‘ಆಯುಷ್ಮಾನ್‌ಭವ’ದಲ್ಲಿ ಹಲವು ವಿಶೇಷಗಳಿವೆ. ಜೊತೆಗೆ ಹಿರಿಯ ನಟ ಅನಂತ್‌ನಾಗ್ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ದ್ವಾರಕೀಶ್ ಬ್ಯಾನರ್‌ನಲ್ಲಿ ಯೋಗೀಶ್ ದ್ವಾರಕೀಶ್ ನಿರ್ಮಾಣದ 52ನೇ ಚಿತ್ರವಿದು. ಈ ಸಿನಿಮಾಗೆ ಸಂಗೀತ ಸಂಯೋಜಿಸಿರುವುದು ಗುರುಕಿರಣ್. ಅವರ ಸಂಗೀತ ಸಂಯೋಜನೆಯ ನೂರನೇ ಸಿನಿಮಾ ಆಯುಷ್ಮಾನ್ ಭವ.

ಮನುಷ್ಯನ ಬದುಕಿನಲ್ಲಿ ಸಹಜವಾಗಿ ಎದುರಾಗುವ ಹಲವು ಬಗೆಯ ಭಾವನೆಗಳ ತೊಳಲಾಟದಲ್ಲಿ ಸಿಲುಕಿಕೊಂಡವರ ಕಥೆ ಇದು ಎನ್ನುವುದು ನಿರ್ದೇಶಕರ ಅಂಬೋಣ. ರಾಜ್ಯೋತ್ಸವಕ್ಕೆ ತೆರೆಗೆ ಬರಲು ಸಜ್ಜಾಗಿರುವ ಈ ಸಿನಿಮಾವನ್ನು ಕನ್ನಡಿಗರು ನುಡಿಯಷ್ಟೇ ನೆಚ್ಚಿನಿಂದ ಅಪ್ಪಿಕೊಳ್ಳುತ್ತಾರೆ ಎಂಬ ನಂಬಿಕೆಯಲ್ಲಿ ಚಿತ್ರತಂಡವಿದೆ.

**ನನ್ನ ಕನ್ನಡ**

**-ಜಯತೀರ್ಥ,**
**ಸಿನಿಮಾ ನಿರ್ದೇಶಕ**



## ಸರಳತೆಯೇ ಸೂತ್ರ

ಶ್ರೇಷ್ಠವಾದ ಜ್ಞಾನ ಉಳಿದುಕೊಳ್ಳಬೇಕು ಎಂದರೆ ಅದಕ್ಕೆ ಸರಳತೆ ಬೇಕು ಮತ್ತು ಅದಕ್ಕೆ ಮಡಿವಂತಿಕೆ ಇರಬಾರದು. ಈ ಎರಡೂ ಅಂಶಗಳನ್ನು ಇಟ್ಟುಕೊಂಡಿದ್ದರಿಂದಲೇ ಸಂಸ್ಕೃತ ಭಾಷೆ ಜನಬಳಕೆಯಿಂದ ದೂರ ಸರಿಯಿತು. ಸಂಸ್ಕೃತ ಶ್ರೇಷ್ಠವಾದ ಭಾಷೆ. ಆದರೆ ಅದು ತನ್ನ ಮಡಿವಂತಿಕೆಯಿಂದ ಕಳಚಿಕೊಂಡು ಮುಂದಿನ ಪೀಳಿಗೆಗೆ ಸರಳವಾಗಿ ದಾಟಿಕೊಳ್ಳಲಿಲ್ಲ. ಹಾಗಾಗಿ ಅಲ್ಲಿಯೇ ಉಳಿದುಕೊಂಡುಬಿಡ್ತು. ಆದರೆ ಇಂಗ್ಲಿಷ್ ಹಾಗಾಗಲಿಲ್ಲ. ಇಂಗ್ಲಿಷ್ ಇಡೀ ಪ್ರಪಂಚವನ್ನು ವ್ಯಾಪಿಸಿದ್ದು ಅದರ ಸರಳತೆಯಿಂದ ಮತ್ತು ಮಡಿವಂತಿಕೆ ಇಲ್ಲದೇ ಇರುವುದರಿಂದ.

ಈ ಎರಡು ಭಾಷೆಗಳಿಂದ ನಾವು ಕಲಿತುಕೊಳ್ಳಬೇಕಾಗಿರುವುದು ಇಷ್ಟೆ: ಸೊಗಡು ಸೊಗಡು ಎಂದು ಹೇಳುತ್ತೇವಲ್ಲ, ದಯವಿಟ್ಟು ಅದನ್ನು ಅದರ ಪಾಡಿಗೆ ಇರಲು ಬಿಡಿ. ಅದು ಬೆಳೆಯಲಿ. ಇಂಗ್ಲಿಷನ್ನು ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಲಿ. ಎಲ್ಲವನ್ನೂ ಒಳಗೊಂಡು ಬೆಳೆಯುವುದು ಮುಖ್ಯ.

‘ನೀರು’ ಮತ್ತು ‘ಅನ್ನ’ ಎನ್ನುವ ಎರಡೇ ಶಬ್ದಗಳಿಗೆ ಕನ್ನಡದಲ್ಲಿಯೇ ನೂರಾರು ಪರ್ಯಾಯ ಪದಗಳಿವೆಯಂತೆ! ಪ್ರಶಾಂತ್ ಮಾಡ್ತ ಅನ್ನುವ ಪಾದ್ರಿ, ಕನ್ನಡದ ಪರ್ಯಾಯ ಪದಗಳ ದೊಡ್ಡ ಪುಸ್ತಕ ಬರೆದಿದ್ದಾರೆ. ಅದರಲ್ಲಿ ಉಲ್ಲೇಖಿಸಿರುವ ಹಾಗೆ ನೀರು ಅನ್ನು ಒಂದು ಶಬ್ದಕ್ಕೆ ಊಹೆಗೂ ಮೀರಿ ಪರ್ಯಾಯ ಪದಗಳು ಕನ್ನಡದಲ್ಲಿಯೇ ಇವೆ. ನಮ್ಮ ಭಾಷೆಯಲ್ಲಿ ಅಷ್ಟೊಂದು ವೈವಿಧ್ಯವಿದೆ. ನಾವು ಇನ್ನೂ ಬೆಳೆಯಬೇಕು ಎಂದರೆ ಇನ್ನಷ್ಟು ಸರಳವಾಗಬೇಕು, ಮಡಿವಂತಿಕೆ ಬಿಡಬೇಕು. ಆಗ ಮಾತ್ರ ನಮ್ಮ ಕನ್ನಡ ಸಮೃದ್ಧವಾಗಿ ಬೆಳೆಯಲು ಸಾಧ್ಯ.